**ಸಾಕ್ಷಿಗೆ ದಿನಾಂಕ 23.02.2026 ರಂದು ಪ್ರಮಾಣ ವಚನ ನೀಡಲಾಯಿತು.**

**ಪಾಟೀ ಸವಾಲು:ಪಿರ್ಯಾದುದಾರರ ಪರ ವಕೀಲರಿಂದ**

ನಾನು 9 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ಪಿರ್ಯಾದುದಾರರು ನನಗೆ 20 ವರ್ಷಗಳಿಂದ ಪರಿಚಯ. ನಾನು ಪಿರ್ಯಾದುದಾರರಿಂದ 50 ಸಾವಿರ ಹಣ ಸಾಲ ಪಡೆದುಕೊಂಡಿದ್ದೇನು. ನಾನು ಖಾಲಿ ಪೇಪರಗೆ ಸಹಿ ಮಾಡುವುದಿಲ್ಲ. ಪ್ರಕರಣವನ್ನು ದಾಖಲಿಸುವ ಪೂರ್ವದಲ್ಲಿ ಪಿರ್ಯಾದುದಾರರು ವಕೀಲರ ಮೂಲಕ ನೋಟೀಸ್ ನೀಡಿದ್ದರು ಎಂದರೆ ಸರಿ. ನೋಟೀಸ್ ಗೆ ನಾನು ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ಸದರಿ ಪ್ರತ್ಯುತ್ತರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಹಾಜರುಪಡಿಸಲು ತೊಂದರೆ ಇಲ್ಲ. ಪ್ರತ್ಯುತ್ತರದಲ್ಲಿ ಬರೆದ ವಿಚಾರಗಳು ನನಗೆ ಗೊತ್ತಿರುತ್ತದೆ. ಪ್ರತ್ಯುತ್ತರವನ್ನು ನೀಡಲು ವಕೀಲರಿಗೆ ನಾನೇ ಮಾಹಿತಿ ಕೊಟ್ಟಿರುತ್ತೇನೆ. ಸಾಕ್ಷಿಗೆ ಪ್ರತ್ಯುತ್ತರದ ಪ್ರತಿಯನ್ನು ತೋರಿಸಲಾಗಿ ಸಾಕ್ಷಿ ಅದನ್ನು ನೋಡಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಪಿ-5 ಎಂದು ಗುರುತಿಸಲಾಯಿತು. ದಿಃ06.05.2022 ರಂದು ಪ್ರತ್ಯುತ್ತರವನ್ನು ನೀಡಿರುತ್ತೇನೆ ಎಂದರೆ ಸರಿ. ನಿಡಿ-1 ರ ಪತ್ರ ದಿಃ20.01.2022 ರಂದು ಬರೆಯಲಾಗಿರುತ್ತದೆ. ನಾನು ಪಿರ್ಯಾದುದಾರರಿಗೆ ನಿಪಿ-5 ರಂತೆ ಪ್ರತ್ಯುತ್ತರ ನೀಡುವಾಗ ನಿಡಿ-1 ರ ದಾಖಲೆಯ ಬಗ್ಗೆ ನನಗೆ ಮಾಹಿತಿ ಇತ್ತು. ನಾನು ಪ್ರತ್ಯುತ್ತರದಲ್ಲಿ ದಿಃ20.01.2022 ರಂದು ಪಿರ್ಯಾದುದಾರರು ಒಪ್ಪಿಗೆ ಪತ್ರ ಬರೆದುಕೊಟ್ಟಿರುತ್ತಾರೆ ಎಂದು ನಮೂದು ಮಾಡಿಲ್ಲ, ಆ ರೀತಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ.

ಪಿರ್ಯಾದುದಾರರು ಚೆಕ್ಕನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಎಂದು ಹೇಳಿದ್ದು ಆ ಬಗ್ಗೆ ಯಾವುದೇ ಪ್ರಕರಣ ದಾಖಲು ಮಾಡಿಲ್ಲ. ವೀರಣ್ಣ ಎಂಬುವವರು ನಿಡಿ-1 ರ ಬರವಣಿಗೆ ಮಾಡಿರುತ್ತಾರೆ. ವೀರಣ್ಣರವರು ದಾಖಲೆ ಬರೆದಿರುತ್ತಾರೆ ಎಂದು ಯಾವುದೇ ಷರಾ ಬರೆದಿಲ್ಲ. ನಿಡಿ-1 ರ ದಾಖಲೆ ಹಾಗೂ ನಿಡಿ-1 ರಲ್ಲಿರುವ ಸಹಿಯನ್ನು

ನಾನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತ್ಯುತ್ತರದಲ್ಲಿ ವೀರಣ್ಣರವರು ನಿಡಿ-1 ನ್ನು ಬರೆದಿರುತ್ತಾರೆ ಎಂದು ನಮೂದು ಮಾಡಿಲ್ಲ ಆ ರೀತಿ ನಮೂದು ಮಾಡಲು ಯಾವುದೇ ತೊಂದರೆ ಇರಲಿಲ್ಲ. ಪಿರ್ಯಾದುದಾರರು ನಿಡಿ-1 ರಂತೆ ಒಪ್ಪಿಗೆ ಪತ್ರವನ್ನು ನನಗೆ ಬರೆದುಕೊಟ್ಟಿಲ್ಲ ಈ ಪ್ರಕರಣಕ್ಕಾಗಿ ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀಸವಾಲಿಗೆ ಕಾಲವಕಾಶ ಕೇಳಿದ್ದು ಕಾಲವಕಾಶ ನೀಡಲಾಯಿತು.

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್.ಸಿ, ಹುಣಸೂರು.**